# ಕೂಡಲ ಸಂಗಮದ ವಸ್ತು ಸಂಗ್ರಹಾಲಯ

ಬಸವಣ್ಣ ಕಟ್ಟ ಬಯಸಿದ ಕ್ರಾಂತಿಕಾರಿ ಸಮಾಜವು ಜಾತಿ ದ್ವೇಷದಿಂದ ರಕ್ತಪಾತದಲ್ಲಿ ಕಣ್ಮರೆ ಆಯಿತು. ಆ ಕಾಲದ ವಿಪ್ಲವದ ಸಂದರ್ಭ ತಿಳಿಸುವ ಎರಡು ಬಗೆಯ ಚಿತ್ರಗಳು ಕೂಡಲ ಸಂಗಮದ ಬಳಿಯಲ್ಲಿರುವ ವಸ್ತು ಸಂಗ್ರಹಾಲಯದಲ್ಲಿ ಇವೆ. ಒಂದು ಉಬ್ಬು ಕೆತ್ತನೆಯಲ್ಲಿ, ಇನ್ನೊಂದು ಬಣ್ಣದಲ್ಲಿ ಚಿತ್ರಿಸಿರುವ ಹರಳಯ್ಯ, ಮಧುವರಸ ಹಾಗೂ ಶೀಲವಂತರನ್ನು ಎಳೆಯುವ ಶಿಕ್ಷೆಗೆ ಒಳಪಡಿಸಿದ್ದ ಚಿತ್ರಗಳವು.

■ **ಕೆ.ಜೆ. ಜ್ಯೋತಿಪ್ರಭಾ, ಕುಮಟಾ**





# ಬಡವರ ಫ್ರಿಜ್

ಇಂದಿಗೂ ಹಳ್ಳಿಯ ಹೆಚ್ಚಿನ ಮಂದಿ ಫ್ರಿಜ್‌ಗಳನ್ನು ಬಳಸುತ್ತಿಲ್ಲ. ಆದರೆ ಅಗತ್ಯ ವಸ್ತುಗಳನ್ನು ವಾರಗಟ್ಟಲೆ ಹಾಳಾಗದಂತೆ ಸಂರಕ್ಷಿಸಿಡುತ್ತಾರೆ. ಆದರೆ ಇದು ಹೇಗೆ ಸಾಧ್ಯ? ನೆಲದೊಳಗೆ ಮೂರು ಇಂಚಿನಷ್ಟು ಗುಣಿ ತೆಗೆದು ಬೇಕಾದ ಗಾತ್ರದ ಮಣ್ಣಿನ ಪಾತ್ರೆಗಳನ್ನು ಇಡಲಾಗುತ್ತದೆ. ನಂತರ ಅದರ ಸುತ್ತಲೂ ಬೆಳಕು ತಾಗದಂತೆ ಸೆಗಣಿಯನ್ನು ಮೆತ್ತಲಾಗುತ್ತದೆ. ಮೇಲ್ಭಾಗದಲ್ಲಿ ವಸ್ತುಗಳನ್ನಿಡಲು ಸಹಕಾರಿಯಾಗುವಂತೆ ಮುಚ್ಚಳವನ್ನು ಇಡುತ್ತಾರೆ. ಬೇಸಿಗೆಗಾಲದಲ್ಲಿ ಮೇಲ್ಭಾಗದಿಂದ ಸೂರ್ಯನ ಶಾಖ ತಾಗದಂತೆ ಬೈಹುಲ್ಲನ್ನು ಜೋಡಿಸುತ್ತಾರೆ. ಹೆಚ್ಚಾಗಿ ಭತ್ತ, ಅಕ್ಕಿ, ಗೋಧಿ ಹಾಗೂ ಬೆಳೆದ ದವಸ ಧಾನ್ಯಗಳನ್ನು ಸಂಗ್ರಹಿಸಿಡಲು ಇದು ಸೂಕ್ತವಾಗಿದ್ದು ಇಟ್ಟ ವಸ್ತುಗಳು ವರ್ಷಗಟ್ಟಲೆ ಕೆಡದಿರುವುದು ಇದರ ವಿಶೇಷ. ತಯಾರಿಕೆ ಕೂಡಾ ತುಂಬಾ ಸುಲಭ.

■ **ಚಂದ್ರಹಾಸ ಚಾರ್ಮಾಡಿ, ಬೆಳ್ತಂಗಡಿ**



# ಅಪರೂಪದ ಶಿಲ್ಪ

ನಾಲ್ಕು ಕೋರೆ ದಂತಗಳ ವಿಶಿಷ್ಟವಾದ ಐರಾವತದ ಮೇಲೆ ತನ್ನ ವಜ್ರಾಯುಧವನ್ನು ಹಿಡಿದು ಸಂಗಾತಿಯಾದ ಶಚೀದೇವಿಯೊಂದಿಗೆ ಕುಳಿತಿರುವ ಪೂರ್ವ ದಿಕ್ಕಿನ ಪಾಲಕ ಇಂದ್ರನ ಅಪರೂಪದ ನಯನ ಮನೋಹರ ಶಿಲ್ಪವಿದು. ಹಾಸನ ಜಿಲ್ಲೆ ದೊಡ್ಡಗದ್ದವನಹಳ್ಳಿಯ ಶ್ರೀ ಲಕ್ಷ್ಮೀದೇವಸ್ಥಾನದ ಮೇಲ್ಛಾವಣಿಯಲ್ಲಿದೆ.

■ **ಕೆ.ಎನ್. ಪ್ರಭಾಕರ ಗುಪ್ತ, ಹಾಸನ**